Sri PRABHAKAR TELKAR.—Is the Government taking any action ato establish health units where there are more than ten thousand people nd where there are absolutely no health units both private as well as Governm ent ?

Sri H. SIDDAVEERAPPA.—Yes, we will consider. As far as possible, where there are centres or health units for a population of 15,000, Government are considering to have one centre.

ಶ್ರೀ ಕೆ. ಎಚ್. ಹನುಮೇಗೌಡ.—ಸರ್ಕಾರ ಎಲ್ಲಾ ಆಸ್ಪತ್ರೆಗಳನ್ನು ವಹಿಸಿಕೊಳ್ಳುತ್ತದೆ ಎಂದು ಹೇಳಿದ್ದೀರಿ, ತಾಲ್ಲೂಕು ಬೋರ್ಡಿನವರು ಆಯುರ್ವೇದ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಅವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಾ ಆಸ್ಪತ್ರೆಗಳು ತಾಲ್ಲೂಕು ಬೋರ್ಡಿಗೆ ಭಾರ ಆಗಬಾರದು, ಅವರ ಭಾರವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ತಾಲ್ಲೂಕು ಬೋರ್ಡಿನವರು, 8—10 ವರ್ಷದಿಂದ ಕೊಡಬೇಕಾದ ಬಾಕಿ ಉಳಿದಿರುವುದರಿಂದ, ಈ ಬಾಕಿಯನ್ನು ವಜಾ ಮಾಡಿ, ಇನ್ನು ಮುಂದೆ ಒಳ್ಳೆಯ ಸಂಪ್ರದಾಯವನ್ನು ಹಾಕುತ್ತೀರಾ ? ತಾಲ್ಲೂಕು ಬೋರ್ಡಿಗೆ ಹೆಚ್ಚು ಹೊರೆಯಾಗಬಾರದು ಎಂದು ಹಿಂದಿನ ಬಾಕಿಯನ್ನು ವಜಾ ಮಾಡುವುದರ ಮೂಲಕ ತಾಲ್ಲೂಕು ಬೋರ್ಡುಗಳ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನು ಮಾನ್ಯ ಸ್ನೇಹಿತರಾದ ಶ್ರೀಮಾನ್ ಘೋರ್ಪಡೆಯವರು ಹೇಳಬೇಕು. ಸುಮಾರು ಮೂರು ಕೋಟಿ ರೂಪಾಯಿಗಳ ಬಾಕಿ ಉಳಿದುಕೊಂಡು ಬಂದಿದೆ. ಈ ವಿಚಾರವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಆರೋಜನೆ ಮಾಡಬೇಕು.

ಶ್ರೀ ಜೆ. ವೆಂಕಟಪ್ಪ.—ಸಾಧ್ಯವಿ, ಪ್ರತಿಯೊಂದು ಬ್ಲಾಕ್‌ನಲ್ಲೂ ಹೆಲ್ತ್ ಯೂನಿಟ್ ಟೈಪ್ ಸೆಂಟರುಗಳನ್ನು ಮಾಡಬೇಕು ಎಂದು ಹೇಳಿದ್ದೀರಿ. ಆದರೆ ತಮ್ಮ ಆರೋಗ್ಯ ಇಲಾಖೆಯವರು ಬ್ಲಾಕ್ ಮಾಡಿದಾಗ ಕೆಲವು ಊರುಗಳಿಗೆ ಗುಡ್ಡಗಳನ್ನು ಸೇರಿಸಿರುತ್ತಾರೆ; ಅವಕ್ಕೆ ದಾರಿಗಳೇ ಇರುವುದಿಲ್ಲ, ಅಂಥದ್ದು ಸೇರಿಸಿ ಬ್ಲಾಕ್ ಮಾಡಿದ್ದಾರೆ. ಅದನ್ನು ಬದಲಾಯಿಸಿ ಅಂಥ ಕಡೆ ಒಂದು ಹೆಲ್ತ್ ಯೂನಿಟ್ ಟೈಪ್ ಡಿಸ್ಪೆನ್ಸರಿಗಳನ್ನು ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡೋಣ, ಎಲ್ಲಿ ಬ್ಲಾಕು ಡಿವಿಷನ್ ಸರಿಯಾಗಿ ಆಗದಿದ್ದರೆ, ವಿಚಾರ ಮಾಡಿ ಬ್ಲಾಕ್ ರಿಆರ್ಗನೈಸ್ ಮಾಡಲಿಕ್ಕೆ ಬೇಕಾದರೆ ಹೇಳೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕೆಲವೊಂದು ಮಾಹಿತಿ ಬೇಕಾಗಿದ್ದರಿಂದ ಆರೋಗ್ಯ ಇಲಾಖೆಯಲ್ಲಿ ಈ ಪ್ರಶ್ನೆ ಇತ್ಯರ್ಥವಾಗದೆ ಉಳಿದಿದೆ ಎಂದು ಹೇಳಿದ್ದೀರಿ; ನಿನ್ನೆ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರು, ಒಂದೊಂದು ಕಡೆ ಅಧಿಕಾರಿಗಳು ಸುಮ್ಮನೆ ಕೊಕ್ಕೆ ಹಾಕುತ್ತಾರೆ ಎಂದು, ನಿಮ್ಮ ಆರೋಗ್ಯ ಇಲಾಖೆಯಲ್ಲಿ ಕೆಲವೊಂದು ವಿಚಾರಗಳನ್ನು ಒಟ್ಟಿಗೇ ಕೇಳದೆ, ಒಂದೊಂದು ಮಾಹಿತಿಗೆ ಒಂದೊಂದು ಸಲ ಕೇಳುವ ತರಹ ಆಗುತ್ತದೆ. ಆದ್ದರಿಂದ ಇದನ್ನು ತಪ್ಪಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ನಿಮಗೆ ಅನುಭವವಾಗಿರಬಹುದು, ಆದರೆ ನಮ್ಮ ಇಲಾಖೆಯಲ್ಲಿ ಕೊಕ್ಕೆ ಹಾಕುವುದಕ್ಕೆ ಬರುವುದಿಲ್ಲ.

Land Acquisition cases in Dharwar District

298. **Sri B. G. BANAKAR** (Hirekerur).—

Will the Minister for Revenue be pleased to state :—

(*a*) the total number of land acquisition cases in respect of village extension pending in Dharwar District as on the last available date ;

(SRI B. G. BANAKAR)

(*b*) the number of such acquisition cases ended in award and dropping during the last 3 years upto the latest convenient date ;

(*c*) the maximum period for which the land acquisition cases are pending ;

(*d*) the reason for delay in disposing of these land acquisition cases ?

Sri N. HUTCHAMASTHY GOWDA (Minister for Revenue).—

(*a*) 56 as on 1st June 1972.

(*b*) Ended in Award : 42
Ended in dropping, etc. : 30
Total 72

(*c*) Ranging from 5 to 12 years.

(*d*) Procedural defects and legal lacuna noticed while finalising the acquisition proceedings and also writ petitions and review petition filed by the interested persons.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ನಿಮ್ಮ ಉತ್ತರದಲ್ಲಿ ಕೇಸುಗಳು ಡಿಸಪ್ಪೋಸ್ ಮಾಡುವುದಕ್ಕೆ 5 ರಿಂದ 12 ವರ್ಷದವರೆಗೆ ಬೇಕಾಗುತ್ತದೆ ಎಂದು ಹೇಳಿದ್ದೀರಿ. ಒಂದೆರಡು ವರ್ಷದಲ್ಲಿ ಅವನ್ನು ಡಿಸ್‌ಪೋಸ್ ಮಾಡಲು ಆಜ್ಞೆ ಕೊಡುವುದಕ್ಕೆ ಸಾಧ್ಯವಿದೆಯೇ?

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಅದೇ ಉತ್ತರದಲ್ಲಿ ಕಾರಣಗಳನ್ನು ಕೊಟ್ಟಿದ್ದನ್ನು ನೋಡಿದರೆ, ಆ ಕಾರಣಗಳು ಡಿಲೇ ಆಗಿರುವುದನ್ನು ಸಮರ್ಥಿಸುತ್ತದೆ, ಆದರೂ ಸಹ ತೀವ್ರವೇ ಈ ಪ್ರಕರಣ ಮುಗಿಯಬೇಕು ಎಂದು ಆಜ್ಞೆ ಕೊಡುತ್ತೇವೆ.

ಶ್ರೀ ಎಫ್. ಎಸ್. ತಾವರೆ.—ಆಕ್ಸಿಸಿಪಿನ್ ಪ್ರಕರಣದಲ್ಲಿ ತಡವಾಗುವ ದೆಸೆಯಿಂದ ತೊಂದರೆಯಾಗುತ್ತಿದೆ. ತಾವು ಈ ಕೇಸುಗಳು ಮುಗಿಯುವುದಕ್ಕೆ ಅಡ್ಡಿಯಾಗಿರತಕ್ಕ ಅತಂಕಗಳನ್ನು ಕಾಯಿದೆಯಿಂದ ತೆಗೆಯುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನರ್ಕಾರಕ್ಕೆ ಅದನ್ನು ತೀವ್ರತೆಯಿಂದ ಪರಿಗಣಿಸಿ ಅಕ್ಸಿಸಿಪಿನ್ ನಿಯಮವನ್ನು ತಿದ್ದುಪಡಿ ಮಾಡುವ ಅಭಿಪ್ರಾಯವಿದೆ.

ಶ್ರೀ ಜೆ. ವೆಂಕಟಪ್ಪ.—ಸಾಧ್ಯವಾದಷ್ಟು ಈ ಕಾನೂನನ್ನು ತಿದ್ದುಪಡಿ ಮಾಡುತ್ತೇವೆಂದು ಹೇಳಿದರು, ತಾವು ತಿದ್ದುಪಡಿ ಮಾಡಿದರೂ ಸಹ ಈಗ ಇರುವ ನೌಕರರು ನಿಧಾನ ಮಾಡುತ್ತಾರೆ ಅದಕ್ಕೆ ಏನು ಮಾಡುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ನಮಗ್ರ ಕಾನೂನು ಮಾಡಿದಾಗ, ನೌಕರರು ತಪ್ಪು ಮಾಡಲಕ್ಕೆ ಆಗುವುದಿಲ್ಲ. ತಪ್ಪು ಮಾಡಿದರೆ ಅದು ಸರ್ಕಾರದ ತಪ್ಪು ಎಂದು ಗ್ರಹಿಸುತ್ತದೆ.

Vacancies in District Educational Officer's Office at Arsikere

365. **Sri H. S. SIDDAPPA** (Arsikere).—

Will the Minister for Education be pleased to state :—

the number of vacancies remaining unfilled in the Primary Section of Education Department in Arsikere taluk and the reasons for not filling up the vacancies ?